ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**

**PAPER CLIPPINGS**

(10)

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ತು

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ ದಿನಾಂಕ : DATE : 19/12/20

# ಪರಿಷತ್‌ನಲ್ಲಿ ಗೂಂಡಾಗಿರಿ ಆರಂಭಿಸಿದ್ದು ಬಿಜೆಪಿ: ಸಿದ್ದು

ಮೈಸೂರು: 'ಪರಿಷತ್ ಮರ್ಯಾದಾ ಹತ್ಯೆ'ಗೆ ಸಂಬಂಧಿಸಿ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಬಿಜೆಪಿ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಭಾಪತಿ ಇದ್ದರೂ ಅವರ ಸ್ಥಾನದಲ್ಲಿ ಉಪ ಸಭಾಪತಿ ಅವರನ್ನು ಕರೆದುಕೊಂಡು ಹೋಗಿ ನಿಲ್ಲಿಸುವುದು ಗೂಂಡಾಗಿರಿಯಲ್ಲವೇ? ಮೊದಲು ತಪ್ಪು ಮಾಡಲು ಆರಂಭಿಸಿದವರೇ ಬಿಜೆಪಿಯವರು. ಹಾಗಂತ ನಾನು ಯಾರನ್ನೂ ಸಮರ್ಥಿಸಿಕೊಳ್ಳುತ್ತಿಲ್ಲ ಎಂದು ಹೇಳಿದರು.



ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಪರಿಷತ್‌ನಲ್ಲಿ ಉಪ ಮುಖ್ಯಮಂತ್ರಿಗೇನು ಕೆಲಸ? ಸಭಾಪತಿ ಕಚೇರಿ ಬಾಗಿಲು ಹಾಕುವುದು ಏಕೆ? ಸಚಿವ ಮಾಧುಸ್ವಾಮಿ ಮಾರ್ಷಲ್‌ಗೆ ಹೊಡೆಯಲು ಹೋಗಿದ್ದು ಸಭ್ಯತೆಯೇ? ಸರ್ಕಾರಕ್ಕೂ ಪರಿಷತ್‌ಗೂ ಏನು ಸಂಬಂಧ? ತಪ್ಪು ಮೊದಲು ಮಾಡಿದರು, ನಂತರ ಮಾಡಿದರೂ ತಪ್ಪೇ, ನಾನು ಯಾರನ್ನೂ ಸಮರ್ಥಿಸಿಕೊಳ್ಳುತ್ತಿಲ್ಲ. ಆದರೆ, ಬಿಜೆಪಿಯವರು ಮೊದಲು ತಪ್ಪು ಮಾಡಲು ಪ್ರಾರಂಭಿಸಿದರು. ಅವರು ಆ ರೀತಿ ಮಾಡಬಾರದಿತ್ತು ಎಂದರು.